ಅವಳು ಅವನಿಂದ ಕಣ್ಣು ಕಿತ್ತು ಲಾಕ್ ಓಪನ್ ಮಾಡಿ ಮೊಬೈಲೊಳಗೆ ನೆಟ್ಟಳು...

'...'

'ತೀರಿಕೊಂಡವ್ರ ಮೇಲೆ ಆಣೆ ಹಾಕೋದು ಸುಲಭ...'

'ಬಿಡು...'

'ನೀ ಸುಳ್ ಹೇಳಿದಕ್ಕೆ ಬೇಜಾರಾಯ್ತು... ಬಟ್, ಇಟ್ಸ್ ಆಲ್‌ರೈಟ್... ಹಾಗಿದ್ರೆ ಇದ್ನೆಲ್ಲ ಬರ್ದಿದ್ ನಿನ್ ಫ್ರೆಂಡ್ ಯಾರು?'

ಅವಳು ಕಂಪನಾ ಎಂದು ಬರೆಯಲು ಹೆಚ್ಚು ಹೊತ್ತು ತೆಗೆದುಕೊಳ್ಳಲಿಲ್ಲ. ಅವನು ಕಂಪನಾ ಬಗ್ಗೆ ಎಲ್ಲ ವಿಚಾರಿಸಿದ, ಅವಳು ಎಲ್ಲವನ್ನೂ ಹೇಳಿದಳು.. ಆದರೆ 'ತೀರಿಕೊಂಡವರ ಮೇಲೆ ಆಣೆ ಹಾಕುವುದು ಸುಲಭ...' ಎಂದು ನಿಸೂರಾಗಿ ಹೇಳಿದ ಅವನ ಮಾತಿಗೆ ಏನು ಉತ್ತರಿಸಲಾಗಲಿಲ್ಲ. ನಾನು ಅಪ್ಪನಾಣೆ ಅಂದಿದಕ್ಕಾ ಇವನು ಹೀಗೆ ಹೇಳಿದ್ದು? ಎಷ್ಟೋ ಜನರ ಮುಖಗಳು, ಮಾತುಗಳು, ಮನಸುಗಳು ಮೋಡಗಳಂತೆ ಸಣ್ಣ ಗಾಳಿಗೂ ಬದಲಾಗುತ್ತಿರುತ್ತವೆ. ಆದರೆ ಕೆಲವರದ್ದು ಮಾತ್ರ ಮಳೆಹನಿಗಳಂತೆ... ಭುವಿಗಿಳಿಯುತ್ತವೆ, ಹೊಳೆಯಾಗುತ್ತವೆ, ಕಡಲಾಗುತ್ತವೆ. ಹಸಿರ ಮೊಳೆಸುತ್ತವೆ, ಮರವಾಗುವುತ್ತವೆ, ನೆರಳಾಗುತ್ತವೆ. ತೆನೆಯಾಗುತ್ತವೆ, ಭತ್ತ ಅಕ್ಕಿ, ಅನ್ನದ ಅಗುಳೂ ಆಗುತ್ತವೆ... ಎಂದುಕೊಂಡಳು. ಪಕ್ಕದಲ್ಲಿ ಕೂತವನು ಶುದ್ಧ ಮಳೆ ಹನಿಯಂಥವನು ಎನಿಸಿದಾಗ ಸಣ್ಣಗೆ ಮಳೆ ಶುರುವಾಗಿತ್ತು. ನಿನಾದ ಚದುರಿ ಹೋದ ಮೊಡ ಅಷ್ಟೆ! ಎನಿಸಿದಾಗ ಅವಳೊಳಗೂ ಮಳೆ...

ಅಷ್ಟರಲ್ಲಿ ನಿನಾದ, 'ನಿನ್ ಫ್ರೆಂಡ್ ಚೆನ್ನಾಗಿ ಬರಿತಾಳೆ... ಅವ್ಳಿಗೆ ಬ್ಯಾಂಗ್ಲೂರ್ ಕವಿಗೋಷ್ಠಿ ಬಗ್ಗೆ ಹೇಳು... ಬರ್ತಾಳಾ ಕೇಳು... ಇಲ್ಲಾ ಅವ್ಳ ನಂಬರ್ ಕೊಡು, ನಾನ್ ಕಾಂಟ್ಯಾಕ್ಟ್ ಮಾಡ್ತೀನಿ...' ಎಂದು ಕಳುಹಿಸಿದ.

ಕಂಪನಾಳ ಹತ್ತು ಸಂಖ್ಯೆಗಳನ್ನು ಟೈಪ್ ಮಾಡಿ ಬಾಣದ ಗುರುತಿನ ಮೇಲೆ ಮೊಹರು ಒತ್ತಿದಂತೆ ಒತ್ತಿ ಕಳುಹಿಸಿದ ಮೇಲೆ ನಿಡುಸುಯ್ದು ಬ್ಯಾಕ್ ಬಂದಳು... ಬಸ್ಸು ಹೀನಗಾರ್ ಕ್ರಾಸನ್ನು ದಾಟಿತ್ತು... ಅವಳು ಪಕ್ಕದಲ್ಲಿದ್ದವನತ್ತ ನೋಡಿದಳು, ಅವನು ಆಗಲೂ ಮೊಬೈಲ್ ನೋಡುತ್ತಿದ್ದ... ಹಾಗೇ ವಾಲ್‌ಪೇಪರ್ ತೋರಿಸುತ್ತ ಕೇಳಿದ,

'ಈ ಫೋಟೊ ಯಾರದ್ದು?'

ಅವಳಿಗೆ 'ಅಪ್ಪ...' ಎನ್ನಲು ಒಂದು ಕ್ಷಣ ಬೇಕಾಯಿತು... ಎಂದಳು.

'ಚೊಲೊ ಬಂದವ್ರೆ... ಏನ್ ಕೆಲ್ಸ ಮಾಡ್ತಾರೆ? ಕೃಷಿಯಾ?' ಆ ಪ್ರಶ್ನೆ ಎದೆಯನ್ನು ಇರಿಯಿತು... 'ಅಪ್ಪ ಇಲ್ಲ...' ಎಂದು ಹೇಗೆ ಹೇಳುವುದು? ನಿನಾದನ ಬಳಿ ಸತ್ಯ ಹೇಳಿ ಏನನ್ನೋ ಕಳೆದುಕೊಂಡವಳಂತೆ ಖಾಲಿಯಾಗಿದ್ದಳು, ಈಗ ಇವನ ಬಳಿ ಸುಳ್ಳು ಹೇಳಿ ಏನನ್ನೋ ಉಳಿಸಿಕೊಳ್ಳಬೇಕೆನಿಸಿತು..

'ಹ್ಮಾಂ...' ಎಂದುಬಿಟ್ಟಳು... ಅವನು ಮುಗುಳ್ನಕ್ಕಿದ್ದ... 'ತೀರಿಕೊಂಡವರ ಮೇಲೆ ಆಣೆ...' ಎಂದ ನಿನಾದನ ಆ ಮಾತಿಗೆ ತಾನು ಹೀಗಾದರೂ ಸಮಜಾಯಿಷಿ ಕೊಟ್ಟುಕೊಂಡೆ ಎನಿಸಿ ರೆಪ್ಪೆಗಳ ನಡುವಿನ ಹನಿಗಳು ಕರಗುವಂತೆ ನಕ್ಕಳು... ಮತ್ತೆ ಅಭ್ಯಾಸದಂತೆ ಮೊಬೈಲಿನ ಲಾಕ್ ಓಪನ್ ಮಾಡಿ ನಿನಾದನ ಪೇಜ್ ತೆರೆದುಬಿಟ್ಟಿತ್ತು ಅವಳ ಕೈ... ಅವಳೇ ಕಳುಹಿಸಿದ್ದ ಕಂಪನಾಳ ನಂಬರ್ ಮೇಲೆ ಎರಡು ನೀಲಿ ಗೆರೆಗಳನ್ನು ಬಿಟ್ಟರೆ ಮತ್ತೇನು ಇಲ್ಲ... 'ಹಾರ್ಸಿಕಟ್ಟಾ ಇಳ್ಯೋರು ಹಿಂದೆ ಬನ್ನಿ...' ಕಂಡಕ್ಟರ್ ಕೂಗಿಗೆ ಎಚ್ಚೆತ್ತು ಇನ್ನೇನು ಮೊಬೈಲನ್ನು ಬ್ಯಾಗಿನೊಳಗೆ ತುರುಕಬೇಕು